**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09**

ಸಂಖ್ಯೆ: ಸಿಎಸಿ-4/ಬಿ.ಇಡಿ.ದಾ-01/2020-21 ದಿನಾಂಕ: 26-03-2021

## ಅಭ್ಯರ್ಥಿಗಳಿಗೆ ಸೂಚನೆಗಳು

2020-21 ನೇ ಸಾಲಿನ ಬಿ.ಇಡಿ ಕೋರ್ಸಿಗೆ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳನ್ನು ಭರ್ತಿ ಮಾಡುವ ಸಂಬಂಧ ಮೊದಲ ಸುತ್ತಿನ ಆಯ್ಕೆ ಪಟ್ಟಿಯನ್ನು ದಿನಾಂಕ: 04-03-2021 ರಂದು ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿತ್ತು. ಈ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ತಮಗೆ ಹಂಚಿಕೆಯಾದ ಕಾಲೇಜಿಗೆ ದಾಖಲಾಗಲು ಬಯಸಿದಲ್ಲಿ ನಿಯಮಾನುಸಾರ ನಿಗದಿತ ದಾಖಲಾತಿ ಶುಲ್ಕ ಪಾವತಿಸಿ ದಾಖಲಾಗಲು ದಿನಾಂಕ: 20-03-2021ರವರೆಗೆ ಅವಕಾಶ ಕಲ್ಪಿಸಲಾಗಿತ್ತು.

ಮೊದಲ ಸುತ್ತಿನ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಭ್ಯರ್ಥಿಗಳು ದಾಖಲಾಗದೇ ಉಳಿದ ಸೀಟುಗಳಿಗೆ ಎರಡನೇ ಸುತ್ತಿಗೆ ಸೀಟು ಹಂಚಿಕೆ ಮಾಡುವ ಸಂಬಂಧ ಡಯಟ್/ಸಿ.ಟಿ.ಇ ಗಳಿಂದ ಸಲ್ಲಿಸಲಾದ ಕಂಟ್ರೋಲ್ ಶೀಟು ಹಾಗೂ ಸಂಬಂಧಪಟ್ಟ ಬಿ.ಇಡಿ ಕಾಲೇಜುಗಳಿಂದ ಸಲ್ಲಿಕೆಯಾದ ಮಾಹಿತಿಯನ್ನಾಧರಿಸಿ ಲಭ್ಯವಿರುವ ಸೀಟುಗಳನ್ನು ಪರಿಗಣಿಸಿ [Institution wise remaining seats (category wise)] Seat Matrix ಅನ್ನು ಪ್ರತ್ಯೇಕವಾಗಿ (ಕಲಾ ಮತ್ತು ವಿಜ್ಞಾನ ವಿಭಾಗಗಳಿಗೆ) **ದಿನಾಂಕ: 26-03-2021ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಿದೆ. ಕೆಳಕಂಡ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಗೆ Option Entry ಮಾಡಲು ದಿನಾಂಕ: 26-03-2021ರಿಂದ 28-03-2021ರವರೆಗೆ ಅವಕಾಶ ನೀಡಲಾಗಿದೆ.**

- ಮೊದಲನೇ ಸುತ್ತಿಗೆ ಪ್ರಕಟಿಸಲಾದ ಆಯ್ಕೆಪಟ್ಟಿಯಲ್ಲಿ ಕಾಲೇಜು ಹಂಚಿಕೆಯಾಗಿ ದಾಖಲಾಗದವರು.
- ಮೊದಲನೇ ಸುತ್ತಿನ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿ ಕಾಲೇಜು ಹಂಚಿಕೆಯಾಗದವರು.
- ಮೊದಲನೇ ಸುತ್ತಿನ ಎರಡನೇ ಆಯ್ಕೆ ಪಟ್ಟಿಯಲ್ಲಿನ ದಾಖಲಾತಿ ಹೊಂದದ ಅಭ್ಯರ್ಥಿಗಳು.

**Option Entry ಮಾಡುವ ಸಂಬಂಧ ಅಭ್ಯರ್ಥಿಗಳು ಕೆಳಕಂಡ ಸೂಚನೆಗಳನ್ನು ಗಮನಿಸುವುದು.**

1. ಎರಡನೇ ಸುತ್ತಿನ ಸಂಸ್ಥೆ ಹಂಚಿಕೆ ಪ್ರಕ್ರಿಯೆಗೆ ದಿನಾಂಕ: 04-03-2021ರಂದು ಪ್ರಕಟಿಸಿದ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.
2. ಪ್ರಕಟಿಸಲಾದ Seat Matrix ವಿವರಗಳನ್ನು ಅಭ್ಯರ್ಥಿಗಳು ಜಾಗರೂಕತೆಯಿಂದ ಓದಿ ಅರ್ಥೈಸಿಕೊಂಡು ವೆಬ್ ಸೈಟ್ www.schooleducation.kar.nic.in ನಲ್ಲಿ ನೀಡಲಾದ **BEd-2020-21-Option Entry for second round Seat Allotment ಲಿಂಕನ್ನು ಕ್ಲಿಕ್ ಮಾಡಿ ತಮ್ಮ Username ಮತ್ತು Password ಅನ್ನು ನಮೂದಿಸುವುದರೊಂದಿಗೆ Login ಆಗಿ ತಾವು ದಾಖಲಾತಿ**

**ಬಯಸುವ ಕಾಲೇಜುಗಳಿಗೆ Option Entry ದಾಖಲಿಸುವುದು. Option Entry ಯನ್ನು ಹೆಚ್ಚಿನ ಸಂಖ್ಯೆಯಲ್ಲಿ ನೀಡುವುದು.**

3. ಒಂದು ವೇಳೆ Option Entry ಮಾಡಲು ನೀಡಿರುವ ಅವಕಾಶವನ್ನು ಬಳಸಿಕೊಳ್ಳದೇ ಕಾಲೇಜುಗಳ ಆಯ್ಕೆಗಳನ್ನು ದಾಖಲಿಸದೇ ಇದ್ದಲ್ಲಿ, ಮೊದಲನೇ ಸುತ್ತಿನ ಮೊದಲು ತಾವು ದಾಖಲಿಸಿದ ಕಾಲೇಜಿನ ಆಯ್ಕೆಯಂತೆ ಹಂಚಿಕೆ ಮಾಡಲಾಗುವುದು.
4. Seat Matrix ಅನ್ವಯ ಅಭ್ಯರ್ಥಿಗಳು ನೀಡಿದ ಕಾಲೇಜಿನ ಆಯ್ಕೆಗಳನ್ನು ಪರಿಗಣಿಸಿ ಮೆರಿಟ್ ಹಾಗೂ ರೋಸ್ಟರ್ ಅನ್ವಯ ಲಭ್ಯವಿರುವ ಸೀಟುಗಳನ್ನು ಎರಡನೇ ಸುತ್ತಿಗೆ ಸೀಟು ಹಂಚಿಕೆ ಮಾಡಲಾಗುವುದು.
5. ಮೊದಲನೇ ಸುತ್ತಿನ ಆಯ್ಕೆ ಪಟ್ಟಿ ಹಾಗೂ ಮೊದಲನೇ ಸುತ್ತಿನ ಎರಡನೇ ಆಯ್ಕೆ ಪಟ್ಟಿಯಲ್ಲಿ ಕಾಲೇಜು ಹಂಚಿಕೆಯಾಗಿ ದಾಖಲಾಗದೇ ಇರುವ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯು ಕೊನೆಯ ಅವಕಾಶವಾಗಿರುತ್ತದೆ.
6. ದಿನಾಂಕ: 24-03-2021ರಂದು ಪ್ರಕಟಿಸಲಾದ ಮೊದಲನೇ ಸುತ್ತಿನ ಎರಡನೇ ಆಯ್ಕೆ ಪಟ್ಟಿಯಲ್ಲಿ 447 ಅಭ್ಯರ್ಥಿಗಳಿಗೆ ವಿಶೇಷ ಪ್ರಕರಣದಡಿ ಸೀಟು ಹಂಚಿಕೆ ಮಾಡಲಾಗಿದೆ. ಈ ಪಟ್ಟಿಯಲ್ಲಿನ ಅಭ್ಯರ್ಥಿಗಳು ಹಂಚಿಕೆಯಾದ ಕಾಲೇಜುಗಳಿಗೆ ಒಂದೊಮ್ಮೆ ದಾಖಲಾಗದ ಪಕ್ಷದಲ್ಲಿ ಉಳಿಕೆಯಾಗುವ ಸೀಟುಗಳಿಗೆ ನಿಯಮಾನುಸಾರ ಮೆರಿಟ್ ಹಾಗೂ ರೋಸ್ಟರ್ ಗಳನ್ವಯ ಹಂಚಿಕೆಮಾಡಲಾಗುವುದು. ಈ ಹಿನ್ನೆಲೆಯಲ್ಲಿ ಈ ಕಾಲೇಜುಗಳಿಗೂ ಸಹ ದಾಖಲಾಗಲು ಬಯಸುವ ಅಭ್ಯರ್ಥಿಗಳು Option Entry ನೀಡಬಹುದು.

**Sd/-**

ವಿಶೇಷಾಧಿಕಾರಿ